ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಹಾರಾಷ್ಟ್ರ ಸರಕಾರದಲ್ಲಿ ಕೋ ಆಪರೇಟಿವ್ ಸೊಸೈಟಿಗಳ ಆಡಿಟ್ ಮಾಡಲಿಕ್ಕೆ ಚಾರ್ಟರ್ಡ್ ಅಕೌಂಟೆಟ್ಸ್‌ಗಳನ್ನು ನೇಮಿಸುತ್ತಾರೆ. ಅದೇ ರೀತಿ ನಮ್ಮ ಸರಕಾರದಲ್ಲಿ ತಾವು ನೇಮಿಸುತ್ತೀರಾ ಹೇಗೆ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ನಾನು ಆಗಲೇ ಹೇಳಿದೆ ಇವರನ್ನು ಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕೆಂಬ ಆಲೋಚನೆ ಸರಕಾರದಲ್ಲಿ ಇದೆ. ಆದರೆ ಅದರ ಬಗ್ಗೆ ಕಡೆಯದಾಗಿ ತೀರ್ಮಾನ ತೆಗೆದುಕೊಂಡಿಲ್ಲ.

ರಾಜ್ಯದಲ್ಲಿ ಮಹಿಳಾ ಸಹಕಾರ ಸಂಘಗಳ ಸಂಖ್ಯೆ

723 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಎಷ್ಟು ಮಹಿಳಾ ಸಹಕಾರ ಸಂಘಗಳು ಹಾಗೂ ಕ್ರೆಡಿಟ್ ಸೊಸೈಟಿಗಳು ಇರುತ್ತವೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಇಂತಹ ಸಂಘಗಳು ಎಷ್ಟು ಇರುತ್ತವೆ (ತಾಲ್ಲೂಕುವಾರು ವಿವರ ನೀಡುವುದು).

ಇ) ಮಹಿಳಾ ಸೊಸೈಟಿಗಳನ್ನು ಸ್ಥಾಪಿಸಲು ಸರ್ಕಾರ ಉತ್ತೇಜನವನ್ನು ಕೊಡುತ್ತಿದೆಯೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು)

ಅ) ರಾಜ್ಯದಲ್ಲಿ ಒಟ್ಟು 799 ಮಹಿಳಾ ಸಹಕಾರ ಸಂಘಗಳಿದ್ದು, ಈ ಪೈಕಿ 19 ಮಹಿಳಾ ಕ್ರೆಡಿಟ್ ಸೊಸೈಟಿಗಳು ಇರುತ್ತವೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಒಟ್ಟು 91 ಮಹಿಳಾ ಸಹಕಾರ ಸಂಘಗಳಿದ್ದು, ಈ ಪೈಕಿ 17 ಮಹಿಳಾ ಕ್ರೆಡಿಟ್ ಸಹಕಾರ ಸಂಘಗಳಿರುತ್ತವೆ (ತಾಲ್ಲೂಕುವಾರು ಈ ಕೆಳಕಂಡಂತಿವೆ).

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಸಹಕಾರ ಸಂಘಗಳ ಸಂಖ್ಯೆ
1.	ಬೆಳಗಾಂ ತಾಲ್ಲೂಕು	21
2.	ಖಾನಾಪುರ ತಾಲ್ಲೂಕು	1
3.	ಹುಕ್ಕೇರಿ ತಾಲ್ಲೂಕು	5
4.	ಬೈಲಹೊಂಗಲ ತಾಲ್ಲೂಕು	3
5.	ಗೋಕಾಕ್ ತಾಲ್ಲೂಕು	25
6.	ಸವದತ್ತಿ ತಾಲ್ಲೂಕು	6
7.	ಚಿಕ್ಕೋಡಿ ತಾಲ್ಲೂಕು	16
8.	ರಾಮದುರ್ಗ ತಾಲ್ಲೂಕು	5
9.	ಅಥಣಿ ತಾಲ್ಲೂಕು	1
10.	ರಾಯಬಾಗ್ ತಾಲ್ಲೂಕು	8
	ಒಟ್ಟು	91

ಇ) ಹೌದು

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ನಾನು ಕೇಳುವುದು ಏನು ಎಂದರೆ ಬೆಳಗಾಂ ಜಿಲ್ಲೆಯಲ್ಲಿ 91 ಮಹಿಳಾ ಸಹಕಾರಿ ಸಂಘಗಳಿವೆ ಎಂದು ತಾವು ಹೇಳಿದ್ದೀರಿ. ಇವುಗಳು ಬಹಳ ಕಡಿಮೆ ಇವೆ. ಅವುಗಳಿಗೆ ಹೆಚ್ಚಿನ ಉತ್ತೇಜನ ಕೊಟ್ಟು ಸರ್ಕಾರದವರು ಸ್ಥಾಪಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದ್ದೀರಿ? ಎರಡನೆಯದಾಗಿ ಬೆಳಗಾಂ ಜಿಲ್ಲೆಯಲ್ಲಿ ಬೈಲಹೊಂಗಲ ಮತ್ತು ಸವದತ್ತಿ ತಾಲ್ಲೂಕಿನಲ್ಲಿ ಮಹಿಳಾ ಸಹಕಾರಿ ಸಂಘಗಳನ್ನು ರಿಜಿಸ್ಟರ್ ಮಾಡಲಿಕ್ಕೆ ಬಹಳ ತೊಂದರೆ ಇದೆ. ಅದು ತಮ್ಮ ಸರ್ಕಾರದ ಗಮನಕ್ಕೆ ಬಂದಿದೆಯೇ? ಮೂರನೆಯದು, ಈ ಮಹಿಳಾ ಸಹಕಾರಿ ಸಂಘ ರಿಜಿಸ್ಟರ್ ಮಾಡಲು ಕೆ.ಎಂ.ಎಫ್. ನವರಿಂದ ಪರ್ಮಿಷನ್ ಬಂದರೆ ಮಾತ್ರ ಮಾಡುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾರೆ. ಹಾಗಾಗಿ ಕೆ.ಎಂ.ಎಫ್.ನವರಿಂದ ಪರ್ಮಿಷನ್ ತೆಗೆದುಕೊಳ್ಳಲೇಬೇಕು ಎಂದು ಕಡ್ಡಾಯವಿದೆಯೇ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ತಾಲ್ಲೂಕುಗಳಲ್ಲಿ ಈ ಮಹಿಳಾ ಸಂಘಗಳು ಇರತಕ್ಕಂಥ ಕಡೆ ಸಾಮಾನ್ಯವಾಗಿ ಆಡಳಿತ ಚೆನ್ನಾಗಿ ನಡೆಯುತ್ತಿದೆ ಎಂದೇ ನನಗೆ ವರದಿ ಬಂದಿರುವಂಥದ್ದು. ನಾನು ವಿವರಗಳನ್ನು ಹೇಳುವುದಕ್ಕೆ ಸಿದ್ಧವಾಗಿದ್ದೇನೆ. ಈಗ ಸಾಮಾನ್ಯವಾಗಿ ಈ ಸಂಘಗಳ ಮೇಲ್ವಿಚಾರಣೆ ಮತ್ತು ಆಡಳಿತ ನನಗೆ ಬಂದಿರುವ ವರದಿ ಪ್ರಕಾರ ಸಮರ್ಪಕವಾಗಿದೆ ಎಂದೇ ನನಗೆ ಬಂದಿರುವ ವರದಿ. ಆದರೆ ಎಲ್ಲೆಲ್ಲಿ ಏನೇನು ದೋಷಗಳಿವೆ ಎನ್ನುವುದನ್ನು ವಿವರವಾಗಿ ತಿಳಿದು ನಾನು ಸಭೆಯ ಮುಂದೆ ತಿಳಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಸದಸ್ಯರು ಅದನ್ನು ಕೇಳಲೇಇಲ್ಲ. ಸಂಘಗಳನ್ನು ಸ್ಥಾಪಿಸುವುದಕ್ಕೆ ಏನು ಉತ್ತೇಜನ ಕೊಡುತ್ತೀರಿ ಎಂದು ಕೇಳಿದ್ದಾರೆ ಅಷ್ಟೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸಾಮಾನ್ಯವಾಗಿ ಗಂಡುಮಕ್ಕಳು ಸಂಘಗಳನ್ನು ಸ್ಥಾಪನೆ ಮಾಡುತ್ತಾರೆ. ಅದಕ್ಕಿಂತಲೂ ಹೆಚ್ಚಾಗಿ ಹೆಣ್ಣುಮಕ್ಕಳು ಸ್ಥಾಪನೆ ಮಾಡುವುದಕ್ಕೆ ನೀವೇನಾದರೂ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತೀರೋ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಉತ್ತೇಜನ ಸಾಮಾನ್ಯವಾಗಿ ಇತರೆ ಸಹಕಾರಿ ಸಂಘಗಳಿಗೆ ಯಾವ ರೀತಿ ಕೊಡುತ್ತಿದ್ದೇವೋ ಅದೇ ರೀತಿ ಉತ್ತೇಜನ ಕೊಡುತ್ತಿದ್ದೇವೆಯೇ ಹೊರತು ಹೆಚ್ಚಿಗೆ ವಿಶೇಷವಾದಂಥ ರೀತಿಯಲ್ಲಿ ಆ ಸಂಘಗಳ ಪರಿಸ್ಥಿತಿ ನೋಡಿ ಅದರ ಮೇಲ್ವಿಚಾರಣೆ ಎಲ್ಲೆಲ್ಲಿ ಚೆನ್ನಾಗಿ ನಡೆಯುತ್ತಿದೆ, ಯಾವ ವಿಧವಾದಂಥ ರೀತಿಯಲ್ಲಿ ಕೊಡಬೇಕೋ ಆ ರೀತಿಯಲ್ಲಿ ಕೊಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಸ್ಥಾಪನೆಯಾದಾಗ ಏನು ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸ್ಥಾಪನೆಯಾದ ಮೇಲೆ ಯಾವ ರೀತಿ ಉತ್ತೇಜನ ಕೊಡುತ್ತೀರಿ ಎಂದು ಕೇಳುತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ : 91 ಸೊಸೈಟಿಗಳು ಇವೆ ಎಂದು ಹೇಳಿದೆ. ಆದರೆ ಪ್ರಾರಂಭವೇ ಆಗಿಲ್ಲ ಎಂದು ಹೇಳಿ ಆಲೋಚನೆ ಮಾಡುವ ಹಾಗೆ ಇಲ್ಲ. ಕೆಲವು ಕಡೆ ಪ್ರಾರಂಭವಾಗಿದೆ.

ಶ್ರೀ ಸಿ. ಬೈರೇಗೌಡ : ಎಲ್ಲಿ ಸ್ಥಾಪನೆಯಾಗಿದೆ ಅಲ್ಲಿ ಚೆನ್ನಾಗಿ ನಡೆಯುತ್ತಿದೆ ಎಂದು ನೀವು ಒಪ್ಪುತ್ತಿದ್ದೀರಿ, ಅವರೂ ಕೂಡ ಒಪ್ಪುತ್ತಿದ್ದಾರೆ. ಇನ್ನೂ ಹೆಚ್ಚಿಗೆ ಈ ಸಂಘಗಳನ್ನು ಸ್ಥಾಪಿಸುವುದಕ್ಕೆ ತಾವು ಉತ್ತೇಜನ ಏನು ಕೊಡುತ್ತೀರಿ? ಮತ್ತು ಸ್ಥಾಪನೆ ಮಾಡುವುದಕ್ಕೆ ಕೆಎಂಎಫ್‌ನಿಂದ ಪರವಾನಿಗೆ ಬೇಕೆಂದು ಹೇಳುತ್ತಿದ್ದಾರಂತೆ ಅಲ್ಲಿ

ಸ್ಥಳದಲ್ಲಿರತಕ್ಕಂಥವರು. ಆ ಪರವಾನಿಗೆಯನ್ನು ಜಾಗ್ರತೆ ಕೊಡಿಸುವುದಕ್ಕೆ ವಿಪ್ರಾಡು ಮಾಡುತ್ತೀರಾ?

ಶ್ರೀ ಎನ್.ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೇ, ಖಂಡಿತವಾಗಿಯೂ ವಿಪ್ರಾಡು ಮಾಡುತ್ತೇವೆ ಮತ್ತು ಆಡಳಿತ ವಿಷಯದಲ್ಲಿ ಯಾವ ರೀತಿ ನಡೆಯುತ್ತಿದೆ ಎಂದು ತಿಳಿದು ಇನ್ನು ಯಾವ ಯಾವ ರೀತಿ ಅವರಿಗೆ ಪ್ರೋತ್ಸಾಹವನ್ನು ಕೊಡಬಹುದು, ಅದೆಲ್ಲವನ್ನೂ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ. ಮಾನ್ಯ ಸದಸ್ಯರು ನನಗೇನಾದರೂ ಸಲಹೆ ಕೊಟ್ಟರೆ ಅದನ್ನೂ ಕಾರ್ಯಗತ ಮಾಡುವುದಕ್ಕೆ ಪ್ರಯತ್ನಮಾಡುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ನಾನು ಕೇಳುವುದೇನೆಂದರೆ ಬೆಳಗಾಂ ಜಿಲ್ಲೆಯೊಳಗೆ ಸಹಕಾರಿ ಸಂಘಗಳನ್ನು ಸ್ಥಾಪನೆ ಮಾಡಲು ಕೆಎಂಎಫ್.ನವರ ಒಪ್ಪಿಗೆ ಬೇಕು. ಕೆಎಂ.ಎಫ್ ನವರ ಒಪ್ಪಿಗೆ ಪಡೆಯದೇ ಇದ್ದಲ್ಲಿ ನಾವು ಸಹಕಾರಿ ಸಂಘಗಳನ್ನು ರಿಜಿಸ್ಟರ್ ಮಾಡುವುದಿಲ್ಲ ಎಂದು ಅಲ್ಲಿರುವಂಥ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ರವರು ಹೇಳುತ್ತಿದ್ದಾರೆ. ಆ ಕಾರಣಕ್ಕೆ ಕೆಎಂಎಫ್ ನವರ ಪರ್ಮಿಷನ್ ಬೇಕೆ ಬೇಕೆಂದುಕಡ್ಡಾಯ ಮಾಡಿದ್ದೀರಾ? ನಾವು ಏನು ಹೇಳುತ್ತೇವೆ, ಮಹಿಳೆಯರು ಮುಂದೆ ಬರಬೇಕು, ಗಂಡುಮಕ್ಕಳಿಗಿಂತ ಮುಂದೆ ಬರಬೇಕು ಎಂದು ಎಲ್ಲರೂ ಲೆಕ್ಚರ್ ಹೇಳುತ್ತಾರೆ. ಅಲ್ಲಿ ರಿಜಿಸ್ಟರ್ ಆಗದ ಹಾಗೆ ನೋಡಿ ಕೊಳ್ಳುತ್ತಿದ್ದಾರೆ. ಇದಕ್ಕೆ ನೀವು ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಪ್ರತಿಯೊಂದು ಸೊಸೈಟಿ ಹೇಗೆ ನಡೆಯುತ್ತಿದೆ ಎನ್ನುವುದನ್ನು ತಿಳಿದು ಅಲ್ಲಿನ ಪರಿಸ್ಥಿತಿಯನ್ನು ನಾನು ತಿಳಿದುಕೊಂಡು ಯಾವ ಯಾವ ರೀತಿ ಅವರಿಗೆ ಸಹಾಯ ಮಾಡಬಹುದು, ಅದನ್ನು ಆಲೋಚನೆ ಮಾಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸೊಸೈಟಿ ನಡೆಯುವುದು ಅಲ್ಲ.

ಶ್ರೀ ಶಿವಾನಂದ ಹೆಚ್.ಕೌಜಲಗಿ : ಬೆಳಗಾಂ ಜಿಲ್ಲೆಯಲ್ಲಿ ಕೆಎಂಎಫ್. ನವರು ಗಟ್ಟಿಮುಟ್ಟಿ ಮಂದಿ ಸೇರಿಕೊಂಡು ಸಂಘಗಳು ರಿಜಿಸ್ಟರ್ ಆಗದ ಹಾಗೆ ನೋಡಿಕೊಳ್ಳುತ್ತಿದ್ದಾರೆ. ಇದೆಲ್ಲಾ ಸಂಗತಿ ಇದೆ. ಗಂಡು ಮಕ್ಕಳು ರಿಜಿಸ್ಟರ್ ಮಾಡಿಸುತ್ತೇವೆ ಎಂದರೆ ರಿಜಿಸ್ಟರ್ ಮಾಡಿಸುವುದಿಲ್ಲ. ಹೆಣ್ಣುಮಕ್ಕಳು ಮಾಡುವುದಕ್ಕೆ ಮುಂದೆ ಬಂದರೆ ಅದಕ್ಕೆ ಅನುಕೂಲವನ್ನು ಕೊಡುತ್ತೇವೆ ಎಂದೂ ಮತ್ತು ಇದಕ್ಕೆ ಸರ್ಕಾರದ ನಿಯಮ ಕೂಡ ಇದೆ ಎಂದು ಮನೋರಮಾ ಮಧ್ವರಾಜ್ ರವರು ಇದೇ ಸದನದಲ್ಲಿ ಹೇಳಿದ್ದರು. ಅದೇ ಪ್ರಕಾರ ರಿಜಿಸ್ಟರ್ ಮಾಡುವುದಕ್ಕೆ ಕೆಎಂಎಫ್ ನಿಂದ ಒಪ್ಪಿಗೆ ಬರಬೇಕೆಂದು ಹೇಳುತ್ತಾರೆ. ಕೆಎಂ.ಎಫ್ ನಿಂದ ಪರ್ಮಿಷನ್ ತರಲೇಬೇಕೆಂದು ನಿಯಮವಿದೆಯೇ? ಆ ರೀತಿ ನಿಯಮ ಇದ್ದರೆ ಇದೆ ಎಂದು ಹೇಳಿ. ಇಲ್ಲದಿದ್ದರೆ ಇಲ್ಲ ಎಂದು ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಕೆಎಂಎಫ್ ಪರ್ಮಿಷನ್ ಅವಶ್ಯಕತೆ ಇಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದೇ ನಿಮಿಷ. ಅದನ್ನು ಮಾಡುವ ಹಾಗೆ ಇಲ್ಲ. ಮಂತ್ರಿಗಳು ಈ ರೀತಿ ಹೇಳಿಬಿಟ್ಟರೆ ಹೇಗೆ? ಮಿಲ್ಕ್ ಸೊಸೈಟಿಯನ್ನು ಲೇಡೀಸ್‌ಗೋಸ್ಕರ ಮಾಡುವ ಹಾಗೆ ಇಲ್ಲ. ಇರುವ ನಿಯಮವನ್ನು ಗಾಳಿಗೆ ತೂರಿಬಿಡುತ್ತೀರಾ?

(ಗೊಂದಲ)

ತೆಂಗು ಬೆಳೆಯ ರೋಗ ನಿವಾರಣೆ

508 -ಶ್ರೀ ವಾಟಾಳ್ ನಾಗರಾಜ್, (ಚಾಮರಾಜನಗರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?